ಅಂಡರ್ ಗ್ರೌಂಡ್ ಡ್ರೈನೇಜ್ ಸಿಸ್ಟಂ..

ಅಧ್ಯಕ್ಷರು : ಈಗ ಕ್ಲೋಸ್ ಮಾಡೋಣ, ಇನ್ನೊಂದು ದಿವಸ ಮಾತನಾಡುವಿರಂತೆ. ಇನ್ನೊಂದು ದಿವಸ ಪೂರ್ಣ ಸಭೆಯಲ್ಲಿ ಮಾತನಾಡುವಿರಂತೆ.

ಶ್ರೀ ಎನ್. ರಾಜಣ್ಣ : ಓಕೆ ಸಾರ್. ಏನೇ ಆಗಲೀ ಈ ಸಿಟಿಯನ್ನು ಉಳಿಸಬೇಕಾಗಿರುವುದು ನಿಮ್ಮ ನಮ್ಮೆಲ್ಲರ ಕರ್ತವ್ಯ. ಬಹಳ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಈ ನಗರ ಬಹಳ ಕುಲಗೆಟ್ಟಿದೆ. ನಗರವನ್ನು ತಮ್ಮೆಲ್ಲರ ಸಹಕಾರದಿಂದ ಮಾತ್ರ ಉಳಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲಿರುವ ಮಧ್ಯಮ ವರ್ಗದವರು ಮತ್ತು ಬಡವರು ಬಹಳ ನೋವಿನಿಂದ ನರಳುತ್ತಿದ್ದಾರೆ. ಸಮಸ್ಯೆಗಳು ದಿನೇದಿನೇ ಹೆಚ್ಚುತ್ತಿವೆ. ಆದ್ದರಿಂದ ನಾನು ಈ ಸಭೆಯಲ್ಲಿರುವ ಮಾನ್ಯ ರೋಷನ್ ಬೇಗರವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. I request him stop multistoreyed buildings and flats. These owners who are coming from outside to make money are spoiling the city. ಈ ಬಿಲ್ಡರ್ಸ್ ಯಾರು ಇದ್ದಾರೆ ಇವರು ಇಡೀ ನಗರದಾದ್ಯಂದ ಒಂದು ಮನೆಯಲ್ಲಿ, ಒಂದು ಸಂಸಾರ ಇದ್ದಂಥ ಜಾಗದಲ್ಲಿ 20 ಸಂಸಾರ, ಒಂದು ಸಂಸಾರ ಇದ್ದಾಗ ಸುಮಾರು 30 ರಿಂದ 40 ಮರಗಳು ಬೇರೆ ಜಾಗಗಳಲ್ಲಿ ಇರುತ್ತಿತ್ತು. ಸುಮಾರು ಈಗ 10 ವರ್ಷದಿಂದ ಈ ಬಿಲ್ಡರ್ಸ್ 50 ರಿಂದ 60 ಸಾವಿರ ಮರಗಳನ್ನು ಕಡಿದಿದ್ದಾರೆ. ಇವೊತ್ತು ಮನೆಗಳು ಜಾಸ್ತಿಯಾಗಿ ಬಹಳ ಇಕ್ಕಟ್ಟಿನ ಪರಿಸ್ಥಿತಿ ನಿರ್ಮಾಣವಾಗಿದೆ. ಈ ನಗರವನ್ನು ಉಳಿಸಬೇಕಾಗಿರುವುದು ನಿಮ್ಮ ನಮ್ಮೆಲ್ಲರ ಕರ್ತವ್ಯ. ಆದುದರಿಂದ ಎಲ್ಲರ ಸಹಕಾರದಿಂದ ಈ ಬಿಲ್ಡರ್ಸ್‌ನ್ನು ಅಟ್ಟ ಕಳುಹಿಸಬೇಕಾಗಿದೆ. ನಾನು ಇನ್ನೂ ಬಹಳ ಮಾತನಾಡುವುದಿತ್ತು. I am thankful to you Sir, and all the members who have suggested my name to speak.

ಪ್ರಕಟಣೆ

ಅಧ್ಯಕ್ಷರು : ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 120 ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 7ನೇ ಮಾರ್ಚ್ 1996 ರಂದು ಪುನರ್ ಪರಿಶೀಲನೆಗೆ ತೆಗದುಕೊಂಡು ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ 1996ನ್ನು ಯಾವುದೇ ತಿದ್ದುಪಡಿ ಇಲ್ಲದೇ ಅನುಮೋದಿಸಿತೆಂದು ಈ ಮೂಲಕ ತಿಳಿಯಪಡಿಸುತ್ತಿದ್ದೇನೆ.

ಈ ದಿವಸ ನನ್ನ ಕಳೆದ 14 ತಿಂಗಳ ಅವಧಿಯಲ್ಲಿ ಬಹಳ ಸುದಿನ. ಸದನ ಕಲಾಪದ ಸಮಿತಿ ನಿರ್ಣಯಿಸಿದ್ದು ಬಜೆಟ್ ಮೇಲಿನ ಸಾಮಾನ್ಯ ಚರ್ಚೆಗೆ 840 ನಿಮಿಷಗಳ ಕಾಲಾವಧಿ. ನಾವು ಸುಮಾರು 920 ನಿಮಿಷಗಳ ಕಾಲ ಚರ್ಚೆ ಮಾಡಿದ್ದೇವೆ. ಇದರಲ್ಲಿ 22 ಜನ

ಸದಸ್ಯರುಗಳು ಭಾಗವಹಿಸಿದ್ದಾರೆ. ಬಿ.ಜೆ.ಪಿ.ಯಿಂದ 6 ಜನ, ಕಾಂಗ್ರೆಸ್‌ನಿಂದ 5 ಜನ, ಜನತಾ ದಳದಿಂದ 4 ಜನ, ಇನ್ನು ಉಳಿದ ಇತರ ಸದಸ್ಯರು, ಇವೊತ್ತು ಇಷ್ಟು ಹೊತ್ತಾದರೂ ಕೂಡ ತಾಳ್ಮೆಯಿಂದ ನನ್ನೊಡನೆ ಸಹಕರಿಸಿದ ಮಾನ್ಯ ಪ್ರತಿ ಪಕ್ಷದ ನಾಯಕರಾದಿಯಾಗಿ ಎರಡೂ ಕಡೆ ಇರತಕ್ಕಂಥ ಎಲ್ಲಾ ಹಿರಿಯ ಸದಸ್ಯರುಗಳಿಗೆ ಹೃತ್ಪೂರ್ವಕವಾಗಿ ನಾನು ವಂದಿಸುತ್ತಿದ್ದೇನೆ. ಕಾರಣ ಇಷ್ಟೆ. ಸುಪ್ರಮಾಗಿರತಕ್ಕಂಥ ಪ್ರತಿಭೆ ಇರುವ ಅನೇಕ ಜನ ಹೊಸ ಸದಸ್ಯರುಗಳು ಏನು ಹಿಂದಿನ ಸಾಲಿನಲ್ಲಿರುತ್ತಾರೆ ಅವರಿಗೆ ತಮ್ಮ ಅಭಿಪ್ರಾಯಗಳನ್ನು ಹೇಳಲಿಕ್ಕೆ ಅವಕಾಶ ಕೊಟ್ಟಿದ್ದೇವೆ. ಈ ರೀತಿಯಲ್ಲಿ ಕೆಲಸ ಮಾಡಿದಾಗ ಮಾತ್ರ ಈ ಸದನದ ಕಾರ್ಯವೈಖರಿಗೆ ಒಂದರ್ಥ ಬರುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿ ವಿಶೇಷವಾಗಿ ನಮ್ಮ ಪತ್ರಿಕಾ ಪ್ರತಿನಿಧಿಗಳು ಇಷ್ಟು ಹೊತ್ತಾದರೂ ಕೂಡ ಕುಳಿತು ಸಹಕರಿಸಿದ್ದಾರೆ, ಮತ್ತೆ ತಮ್ಮೆಲ್ಲರಿಗೂ ವಂದಿಸಿ ಈ ಸಭೆಯನ್ನು ಮುಂದೂಡಲಾಗುತ್ತಿದೆ. ನಾಳೆ ಬೆಳಿಗ್ಗೆ 9 ಗಂಟೆಗೆ ಸದನದಲ್ಲಿ ಸಮಾವೇಶಗೊಳ್ಳೋಣ.

(ಸದನದ ಸಭೆಯು ರಾತ್ರಿ 10-25ಕ್ಕೆ ಮುಕ್ತಾಯ ಗೊಂಡಿತು ಹಾಗೂ ದಿನಾಂಕ 8ನೇ ಮಾರ್ಚ್ 96ರ ಶುಕ್ರವಾರದಂದು ಬೆಳಿಗ್ಗೆ 9 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(+ ಈ ಚಿಪ್ಪೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)